**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. ನಂಃ 10015/2019**

**ಚಾಸಾ ಃ35**
**ಪ್ರಾಸಾ ಃ14**

**ಹೆಸರು : ಬಸವನಗೌಡ ಕಲ್ಲೇಗೌಡ ಪಾಟೀಲ್**
**ತಂದೆಯ ಹೆಸರು : ಕಲ್ಲೇಗೌಡ**
**ವಯಸ್ಸು : 40 ವರ್ಷ**
**ವೃತ್ತಿ : ಸಿಪಿಐ, ಐಜಿಪಿ ವಲಯ, ಬೆಂಗಳೂರು**
**ವಾಸ : ಬೆಂಗಳೂರು**

**ಈ ದಿನ ದಿನಾಂಕ 19.05.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ನಾನು ದಿನಾಂಕ 11-5-2017 ರಿಂದ ದಿನಾಂಕ 7-2-2019 ರವರೆಗೆ ನಾನು ದೊಡ್ಡಬಳ್ಳಾಪುರದ ನಗರ ಪೋಲೀಸ್ ಠಾಣೆಯಲ್ಲಿ ಅಪರಾಧ ವಿಭಾಗದ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ 07/08.01.2019 ರಂದು ಮಧ್ಯರಾತ್ರಿ 12.00 ಗಂಟೆ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿದ್ದ ಸಮಯದಲ್ಲಿ ಪಿರ್ಯಾದುದಾರರಾದ ಚಾಸಾ-1 ಮಂಜುನಾಥ್‌ರವರು ಠಾಣೆಗೆ ಹಾಜರಾಗಿ ನೀಡಿದ ಬೆರಳಚ್ಚು ಲಿಖಿತ ದೂರನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೆನೆ. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ

ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಅದರನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದು ಅದನ್ನು  ನಿಪಿ-37 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ನಿಪಿ 37 (ಎ) ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಅದೇ ದಿನಾ ಚಾಸಾ 36 ರವರಿಗೆ ಹಸ್ತಾಂತರಿಸಿರುತ್ತೇನೆ.

3. ದಿನಾಂಕ 9-1-2019ರಂದು ಚಾಸಾ 36 ವೃತ್ತ ನಿರೀಕ್ಷಕರ ಮೌಖಿಕ ಆದೇಶದ ಮೇರೆಗೆ ಆರೋಪಿತರ ಪತ್ತೆಗಾಗಿ ಸಿಬ್ಬಂದಿಯವರ ಚಾಸಾ 27 ಶಶಿಧರ್ ಮತ್ತು ಚಾಸಾ 28 ಅರ್ಜುನ್ ಲಮಾಣಿ ಮತ್ತು ಬಾತ್ಮಿದಾರರನ್ನು  ನನ್ನ ಜೊತೆ ಕರೆದುಕೊಂಡು ಬೆಂಗಳೂರು ಜಾಲಹಳ್ಳಿ ಪೀಣ್ಯಾ ಕೈಗಾರಿಕಾ ಕೇಂದ್ರ ಮತ್ತು ಸುತ್ತಮುತ್ತ ಹುಡುಕಾಡಿದರೂ ಸಹ ಆರೋಪಿಯವರು ಪತ್ತೆಯಾಗಿರುವುದಿಲ್ಲ.

4. ದಿನಾಂಕ 10-1-2019ರಂದು ಪುನಃ ಅದೇ ಸಿಬ್ಬಂದಿಯವರೊಂದಿಗೆ ಮತ್ತು ಬಾತ್ಮಿದಾರರೊಂದಿಗೆ ಆರೋಪಿತರ ಪತ್ತೆಗಾಗಿ ಬೆಂಗಳೂರಿನ 8 ನೇ ಮೈಲಿ ಪ್ರದೇಶದಲ್ಲಿ ವಿಚಾರಿಸಲಾಗಿ ನೆಲಮಂಗಲ-ಕುಣಿಗಲ್ ವೃತ್ತದ ಬಳಿ ಆರೋಪಿತರು ಇರುತ್ತಾರೆ ಎಂದು ಬಾತ್ಮಿದಾರರಿಂದ ಬಂದ ಮಾಹಿತಿ ಮೇರೆಗೆ ನೆಲಮಂಗಲದ ಕುಣಿಗಲ್ ವೃತ್ತದ ಬಳಿ ಬೆಳಿಗ್ಗೆ 7 ಗಂಟೆಗೆ ಬಂದು ಆರೋಪಿ ಆನಂದ್ ಅಲಿಯಾಸ್ ಕಬಾಬ್ ಆನಂದ್ ಇವರನ್ನು ಸಿಬ್ಬಂದಿಯವರೊಂದಿಗೆ ವಶಕ್ಕೆ ಪಡೆದುಕೊಂಡು 8 ಗಂಟೆಗೆ ದೊಡ್ಡಬಳ್ಳಾಪುರದ ವೃತ್ತ ನಿರೀಕ್ಷಕರ ಮುಂದೆ ಹಾಜರುಪಡಿಸಿ ವರ ದಿಯನ್ನು ನೀಡಿರುತ್ತೇನೆ. ನಾನು ನೀಡಿದಂತಹ ವರದಿಯನ್ನು  ಈಗ ನೋಡುತ್ತಿದ್ದು ಅದನ್ನು ನಿಪಿ

38 ಎಂದು ಗುರುತಿಸಲಾಯಿತು. ನಾನು ವಶಪಡಿಸಿಕೊಂಡು ವೃತ್ತ ನಿರೀಕ್ಷಕರ ಮುಂದೆ ಹಾಜರುಪಡಿಸಿದ ಆರೋಪಿಯನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

5. ದಿನಾಂಕ 8-1-2019 ರ ಮಧ್ಯರಾತ್ರಿ 1 ಗಂಟೆಯವರೆಗೆ ನಾನು ಠಾಣೆಯಲ್ಲಿ ಕರ್ತವ್ಯದಲ್ಲಿದ್ದೆನು. ದಿನಾಂಕ 7-1-2019 ರ 9 ಗಂಟೆಯಿಂದ ನಾನು ಠಾಣೆಯಲ್ಲಿ ಇದ್ದೆನು. ಮಂಜುನಾಥ್‌ರವರು ಠಾಣೆಗೆ ಬರುವ ಪೂರ್ವದಲ್ಲಿಯೇ ಪಿರ್ಯಾದನ್ನು ಬರೆದುಕೊಂಡು ಬಂದಿದ್ದರು. ನಿಪಿ 1 ರ ದೂರಿನ ಪುಟ 2ರಲ್ಲಿ ಕೊಲೆ ಎಂಬ ಪದವನ್ನು ತಿದ್ದಿರುತ್ತಾರೆ ಎಂದರೆ ಆ ರೀತಿ ಕಂಡುಬರುತ್ತದೆ. ದಿನಾಂಕ 7-1-2019 ರಂದು ರಾತ್ರಿ ದೇವರಾಜು ನಗರ ಪ್ರದೇಶದಲ್ಲಿ ರಾತ್ರಿ ಗಸ್ತಿಗಾಗಿ ಯಾರನ್ನು ನೇಮಿಸಿದ್ದೆ ಎಂದು ಈಗ ಹೇಳಲು ಸಾಧ್ಯವಿರುವುದಿಲ್ಲ. ಘಟನೆಗೆ ಸಂಬಂಧಪಟ್ಟಂತೆ ಮಂಜುನಾಥ್‌ರವರು ದೂರು ನೀಡುವ ಪೂರ್ವದಲ್ಲಿ ನಮಗೆ ಯಾವುದೇ ಮಾಹಿತಿ ಬಂದಿರಲಿಲ್ಲ.

6. ಅದೇ ರೀತಿ ದೂರು ನೀಡುವ ಪೂರ್ವದಲ್ಲಿ ಆಸ್ಪತ್ರೆಯಿಂದ ಮರಣ ಹೊಂದಿದ ಬಗ್ಗೆ ಮಾಹಿತಿ ಬಂದಿರುವುದಿಲ್ಲ. ಮಂಜುನಾಥರು ದೂರು ನೀಡಿದ ತಕ್ಷಣವೇ ಘಟನೆ ಬಗ್ಗೆ ನಾನು ಮೇಲಾಧಿಕಾರಿಗೆ ಮಾಹಿತಿ ನೀಡಿರುತ್ತೇನೆ. ದೂರು ನೀಡಿದ ನಂತರ ಅದೇ ದಿನ ರಾತ್ರಿ ನಾನು ಆಸ್ಪತ್ರೆಗೆ ಮತ್ತು ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದೆನು. ನಾನು ಭೇಟಿ ಮಾಡಿದ್ದೆನು ಆದರೆ ಮಾಲಾಧಿಕಾರಿಗಳು ಭೇಟಿ ಮಾಡಿದ್ದರೋ ಅಥವಾ ಇಲ್ಲವೋ ಗೊತ್ತಿರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ಕತ್ತಲಿತ್ತು.

7. ನಾನು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಸಾರ್ವಜನಿಕರು ಸೇರಿದ್ದರು ಅವರೇ ಘಟನಾ ಸ್ಥಳವನ್ನು ತೋರಿಸಿರುತ್ತಾರೆ. ಅವರ ಹೆಸರುಗಳನ್ನು ಹೇಳಲು ಬರುವುದಿಲ್ಲ. ಘಟನಾ ಸ್ಥಳದಲ್ಲಿ ಸಾಕ್ಷ್ಯ ನಾಶವಾಗದಂತೆ ಸ್ಥಳ ಸಂರಕ್ಷಿಸಲು ಸಿಬ್ಬಂದಿಯವರನ್ನು ನೇಮಿಸಿದ್ದೆನು. ಈಗ ಅವರ ಹೆಸರನ್ನು ಹೇಳಲು ಸಾಧ್ಯವಿಲ್ಲ. ಸ್ಥಳಕ್ಕೆ ಹೋದಾಗ ನಾನು ಯಾವುದೇ ಬರವಣಿಗೆ ಮಾಡಿರುವುದಿಲ್ಲ. ಆಸ್ಪತ್ರೆಗೆ ಎಷ್ಟು ಗಂಟೆಗೆ ಹೋಗಿರುತ್ತೇನೆ ಎಂದು ಈಗ ನೆನಪಿರುವುದಿಲ್ಲ. ಆಸ್ಪತ್ರೆಗೆ ಹೋದಾಗ ವೈದ್ಯರನ್ನು ಭೇಟಿ ಮಾಡಿರುತ್ತೇನೆ ಆದರೆ ಅವರ ಹೆಸರು ಗೊತ್ತಿರುವುದಿಲ್ಲ.

8. ವೈದ್ಯರನ್ನು ಹೊರತುಪಡಿಸಿ ಆ ದಿನ ರಾತ್ರಿ ನಾನು ಬೇರೆ ಯಾರನ್ನೂ ಸಹ ಭೇಟಿ ಮಾಡಿರುವುದಿಲ್ಲ. ತೀರಿಕೊಂಡ ನಂತರ 2 ಗಂಟೆಯ ಅವಧಿಯಲ್ಲಿ ನಾನು ಮತ್ತು ಚಾಸಾ 1 ರವರು ಪೂರ್ವಾ ನಿಯೋಜಿತವಾಗಿ ಸುಳ್ಳು ದೂರನ್ನು ಪಡೆದುಕೊಂಡು ಆರೋಪಿಯನ್ನು ಸುಳ್ಳು ಪ್ರಕರಣದಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರಕರಣ ದಾಖಲಿಸಿಕೊಂಡ ನಂತರ ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಆಸ್ಪತ್ರೆಗೂ ಸಹ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

9. ಆರೋಪಿಯ ಪತ್ತೆಗಾಗಿ ನಾನು ಮತ್ತು ನನ್ನ ಇಬ್ಬರೂ ಸಿಬ್ಬಂದಿಯವರು ಹೋಗುವ ಸಮಯದಲ್ಲಿ ಆರೋಪಿಯ ಚಹರೆ ಪತ್ತೆಗಾಗಿ ನಮ್ಮ ಬಳಿ ಫೋಟೋ ಇತ್ತು ಮತ್ತು ಬಾತ್ಮಿದಾರರು ಸಹ ಇದ್ದರು. ಆರೋಪಿಯನ್ನು ನೆಲಮಂಗಲದ ಕುಣಿಗಲ್ ವೃತ್ತದಲ್ಲಿ ವಶಕ್ಕೆ ಪಡೆದುಕೊಂಡ ಸಮಯದಲ್ಲಿ ಆರೋಪಿಯು ಕಪ್ಪು ಬಣ್ಣದ ಪ್ಯಾಂಟನ್ನು ಧರಿಸಿದ್ದನು ಆದರೆ ಯಾವ ಬಣ್ಣದ ಶರ್ಟ್ ಧರಿಸಿದ್ದನು ಎಂದು ನೆನಪಿರುವುದಿಲ್ಲ. ಆರೋಪಿಯ ಪತ್ತೆಗಾಗಿ ಮೇಲಾಧಿಕಾರಿಗಳು ಆ ದಿನ ನನಗೆ ಯಾವುದೇ ಮೌಖಿಕ ಆದೇಶ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಆ ದಿನ ಆರೋಪಿಯು ಶರ್ಟ್ ಹಾಕಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಶರ್ಟ್ ಹಾಕಿಕೊಂಡಿದ್ದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ಮೃತ ಗಂಗಾಧರನ ಸಾವಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಮಂಜುನಾಥನ ಮಾತು ಕೇಳಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ **ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.**

**ಮರು ವಿಚಾರಣೆ : ಇರುವುದಿಲ್ಲ.**

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ